ಕರ್ನಾಟಕ ಸರ್ಕಾರ


# ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ

ರೈತ ಭವನ, ಜನರಲ್ ಕಾರ್ಯಪ್ಪ ವೃತ್ತ, ಗದಗ– 582 101

E-mail: registrarksrdpru@gmail.com Office Phone: 08372-230338, Fax: 08372-297343


ಸಂ:ಕರಾಗ್ರಾಅಪರಾವಿವಿ/ಪಪ್ರ/2017–18 ದಿನಾಂಕ: 10–12–2017

## ಪತ್ರಿಕಾ ಪ್ರಕಟಣೆ

### "ಮಾನವ ಹಕ್ಕುಗಳ ದಿನಾಚರಣೆ ಸಮಾರಂಭ"

ದಿನಾಂಕ 10–12–2017 ರಂದು ಅಂತರಾಷ್ಟ್ರೀಯ ಮಾನವ ಹಕ್ಕುಗಳ ದಿನಾಚರಣೆಯನ್ನು ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ವಿಶ್ವವಿದ್ಯಾಲಯದಲ್ಲಿ ಆಚರಿಸಲಾಯಿತು.

ಈ ಸಮಾರಂಭಕ್ಕೆ ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಸಚಿವರು ತಮ್ಮ ಸಂದೇಶ ನೀಡಿ ಮಾನವ ಹಕ್ಕುಗಳ ಕುರಿತಂತೆ ಸಮಾಜದಲ್ಲಿ ಅತೀ ಹಿಂದುಳಿದ ಮತ್ತು ತುಳಿತಕ್ಕೆ ಒಳಗಾದ ನಾಗರೀಕರನ್ನು ಸಮಸ್ಯೆಯಿಂದ ಮುಕ್ತಗೊಳಿಸಬೇಕಾಗಿದೆ ಎಂದು ತಿಳಿಸುತ್ತಾ ಗ್ರಾಮೀಣ ಜನವಸತಿಗಳಲ್ಲಿ ವಾಸಿಸುವ ಜನರಿಗೆ ಶುದ್ದ ಕುಡಿಯುವ ನೀರು, ಶೌಚಾಲಯ, ಆರೋಗ್ಯ ಹಾಗೂ ಕನಿಷ್ಟ ಉದ್ಯೋಗದಂತೆ ಮಾನವ ಹಕ್ಕುಗಳು ಕಾರ್ಯಗತವಾಗಬೇಕೆಂದು ಆಶಿಸಿದ್ದಾರೆ.

ಸಮಾರಂಭದ ಅಧ್ಯಕ್ಷತೆಯನ್ನು ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ॥ ಬಿ. ತಿಮ್ಮೇಗೌಡರು ವಹಿಸಿ ಮಾತನಾಡುತ್ತಾ ವಿಶ್ವವಿದ್ಯಾಲಯ ಸ್ಥಾಪನೆಯ ಆಶಯದಂತೆ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಮೂಲಭೂತ ಸೌಲಭ್ಯಗಳಾದ ಶುದ್ದ ಕುಡಿಯುವ ನೀರು, ಶೌಚಾಲಯ, ಆರೋಗ್ಯ ಮೂಲಭೂತ ಶಿಕ್ಷಣ ಮುಂತಾದವುಗಳಲ್ಲಿ ಗುಣಾತ್ಮಕ ಬದಲಾವಣೆ ತರುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯವು ಸಂಶೋಧನೆ ಹಾಗೂ ಅನ್ವೇಷಣೆಗಳನ್ನು ಕೈಗೊಂಡು ಜನರ ಜೀವನ ಮಟ್ಟ ಸುಧಾರಣೆಯಲ್ಲಿ ಮಹತ್ವದ ಪಾತ್ರ ವಹಿಸಲಿದೆ ಎಂದು ತಿಳಿಸುತ್ತಾ ಮಹಾತ್ಮ ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕನಸು ನನಸು ಮಾಡಬೇಕಾಗಿದೆ ಎಂದು ಹೇಳಿದರು.

ವಿಶ್ವವಿದ್ಯಾಲಯದ ಕುಲಸಚಿವರಾದ ಡಾ॥ ಎಸ್.ವಿ. ನಾಡಗೌಡರರವರು ಮಾನವ ಹಕ್ಕುಗಳ ಉಗಮ ಹಾಗೂ ಅವುಗಳ ಪ್ರಾಮುಖ್ಯತೆಗಳ ಬಗ್ಗೆ ಸುಧೀರ್ಘವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಶ್ರೀ ಕೆ.ಬಿ.ತಳಗೇರಿ, ಹೆಚ್.ಸಿ.ಇ.ಎಸ್. ಕಾನೂನು ಕಾಲೇಜಿನ ಪ್ರಾಚಾರ್ಯ ಶ್ರೀ ರಡ್ಡೇರ, ಹಾಗೂ ಇತರ ಅತಿಥಿಗಳು, ವಿಶ್ವವಿದ್ಯಾಲಯದ ಅಧಿಕಾರಿಗಳು, ಶಿಕ್ಷಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ಕುಲಸಚಿವರು

ಪ್ರೋ. ಡಾ॥ ಸುರೇಶ ವ್ಹಿ. ನಾಡಗೌಡರ,

ಗೆ,

ಸಂಪಾದಕರು: – ಮೇಲಿನ ಪ್ರಕಟಣೆಯನ್ನು ಸುದ್ದಿಯನ್ನಾಗಿ ತಮ್ಮ ಅಮೂಲ್ಯ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ವಿನಂತಿ.